ತನ್ನ ಕೋಟಿನ ಜೇಬಿನಿಂದ ಒಂದು ಲಕೋಟೆಯನ್ನು ಹೊರತೆಗೆದ. "ನಾನು ನಮ್ಮ ಸರ್ಕಾರದ ವಿಶೇಷ ಪರವಾನಿಗೆಯ ಮೇರೆಗೆ ನಿಮ್ಮಲ್ಲಿಗೆ ಬಂದಿದ್ದೇನೆ." ಎಂದು ಲಕೋಟೆಯೊಳಗಿನಿಂದ ಒಂದು ಪತ್ರವನ್ನು ತೆಗೆದು ಚೇರ್ಮನರ ಕೈಗಿತ್ತ. ಚೇರ್ಮನರು ಪತ್ರವನ್ನು ಸಾವಕಾಶವಾಗಿ ಓದಿ ಹಾಗೆಯೇ ಅಗರ್ಬಿಯ ಕೈಗಿತ್ತು:

"ಸರ್, ನೀವು ಒಬ್ಬ ಮಂತ್ರಿ ಎಂಬುದರ ಬಗ್ಗೆ, ಹಾಗೂ ನಿಮ್ಮ ದೇಶದ ಅಧ್ಯಕ್ಷರ ಪ್ರತಿನಿಧಿಯಾಗಿ ಬಂದಿರುವುದರ ಬಗ್ಗೆ ನನಗೆ ಯವುದೇ ಅನುಮಾನಗಳಿಲ್ಲ. ಆದರೆ, ಈ ಪತ್ರಕ್ಕೆ ನಮ್ಮ ದೇಶದಲ್ಲಿ ಯಾವುದೇ ಮಾನ್ಯತೆ ಇಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ನಮ್ಮ ದೇಶದ ಕಾನೂನಿನ್ವಯ, ನಿಮ್ಮ ದೇಶದವರೇ ಆಗಿದ್ದರೂ, ಗ್ರಾಹಕರ ಅನುಮತಿ ಪತ್ರವಿಲ್ಲದೆ ನಾವು ಅವರ ಬ್ಯಾಂಕ್ ಖಾತೆಯ ವಿವರಗಳನ್ನು ಯಾರಿಗೂ ನೀಡುವಂತಿಲ್ಲ. ಸಾರಿ ಸರ್." ಎಂದು ಹೇಳುತ್ತಾ, ಈ ಕುರಿತು ಮುಂದೆ ಏನೂ ಮಾತನಾಡುವುದು ಉಳಿದಿಲ್ಲವೆಂಬಂತೆ ಚೇರ್ಮನ್ ಎದ್ದು ನಿಂತ. ಆದರೆ, ಇಗ್ನೇಶಿಯಸ್ ಅಗರ್ಬಿ ಇಷ್ಟಕ್ಕೇ ಸೋಲು ಒಪ್ಪಿಕೊಳ್ಳುವ ಅಸಾಮಿಯಾಗಿರಲಿಲ್ಲ.

"ನಮ್ಮ ಮತ್ತು ನಿಮ್ಮ ದೇಶದ ಮಧ್ಯೆ ಮುಂದೆ ಯಾವುದೇ ವ್ಯವಹಾರಗಳು ನಡೆಯುವುದಿದ್ದಲ್ಲಿ ನಾನೇ ಮಧ್ಯಸ್ಥನಾಗಿರುವ ಇಚ್ಛೆಯನ್ನು ಸಹ ನಮ್ಮ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ ಮಿ. ಚೇರ್ಮನ್."

"ಇದು ತುಂಬಾ ಸಂತೋಷದ ವಿಚಾರ ಸರ್. ಆದರೆ, ಇದರಿಂದ ವಾಸ್ತವಿಕವಾಗಿ ಏನೂ ಬದಲಾಗುವುದಿಲ್ಲ ಎಂಬುದು ನನ್ನ ಅಭಿಮತ." ಚೇರ್ಮನ್ ನಿಂತೇ ಇದ್ದರು.

ಇಗ್ನೇಶಿಯಸ್ ಅಗರ್ಬಿ ಸ್ವಭಾವದಲ್ಲಿ ಕೊಂಚ ಜಿಗುಟು ಮನುಷ್ಯನೇ. ಅವನ ಮುಖದಲ್ಲಿ ಯಾವ ಬದಲಾವಣೆಗಳೂ ಆಗಲಿಲ್ಲ.

"ಸರಿ ಹಾಗಾದರೆ, ಚೇರ್ಮನ್ ಸಾಹೇಬರೆ, ನಮ್ಮ ಪ್ರಜೆಗಳ ಕುರಿತಾಗಿ ಮಾಹಿತಿ ನೀಡಲು ಸಹಕರಿಸುತ್ತಿಲ್ಲವೆಂದು ಜಿನೇವಾದ ನಮ್ಮ ರಾಯಭಾರಿಗೆ ತಿಳಿಸಿ ನಿಮ್ಮ ವಿದೇಶಾಂಗ ವ್ಯವಹಾರಗಳ ಇಲಾಖೆಗೆ ತಿಳಿಸುವಂತೆ ನಾವು ಸೂಚಿಸುತ್ತೇವೆ..." ತನ್ನ ಎಚ್ಚರಿಕೆ ಚೇರ್ಮನರ ತಲೆಯೊಳಗೆ ಇಳಿಯಲು ಕೊಂಚ ಸಮಯವನ್ನು ಕೊಟ್ಟು, "...ನೀವು ಇದನ್ನು ಖಂಡಿತ ತಪ್ಪಿಸಬಹುದು. ನಮ್ಮ ನಾಗರಿಕರ ಹೆಸರು ಮತ್ತು ಅವರ ಖಾತೆಗಳಲ್ಲಿರುವ ಹಣ, ಇಷ್ಟು ತಿಳಿಸಿದರೆ ಸಾಕು. ನೀವು ಕೊಟ್ಟಿರುವ ಮಾಹಿತಿಯನ್ನು ನಾವು ಎಂತಹ ಸಂದರ್ಭದಲ್ಲಿಯೂ, ಎಲ್ಲೂ ಬಯಲು ಮಾಡುವುದಿಲ್ಲ."

